**ದಿನಾಂಕಃ 04-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ಅಪಘಾತವು ನನ್ನ ಅಜಾಗರೂಕತೆಯಿಂದ ಸಂಭವಿಸಿರುವುದರಿಂದ ಎಂ.ಎಲ್.ಸಿ ರಿಜಿಸ್ಟರ್ ಅನ್ನು ಹಾಜರುಪಡಿಸಿರುವುದಿಲ್ಲ. ಎಂ.ಎಲ್.ಸಿ ರಿಜಿಸ್ಟರ್ ನಲ್ಲಿ ಯಾವ ಬಸ್ ಡಿಕ್ಕಿ ಪಡಿಸಿದೆ ಎಂದು ನಮೂದು ಇರದ ಕಾರಣ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಲೈಫ್ ಕೇರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ, ಸದರಿ ಆಸ್ಪತ್ರೆಯಲ್ಲಿ ಡಾಃ ಮಂಜುನಾಥ್ ಎಂಬುವವರು ಚಿಕಿತ್ಸೆ ನೀಡಿದ್ದರು. ಸದರಿಯವರು ಈಗಲೂ ಸಹಾ ಸದರಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಅಪಘಾತದಿಂದ ನನಗೆ ತೀವ್ರ ಸ್ವರೂಪದ ಗಾಯಗಳು ಆಗಿಲಿಲ್ಲದಿದ್ದರೂ ವೈದ್ಯರು ಪರಿಚಯವಿದ್ದ ಕಾರಣ ಗಾಯದ ಪ್ರಮಾಣ ಪತ್ರದಲ್ಲಿ ಸುಳ್ಳು ಅಂಶಗಳು ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಲೈಫ್ ಕೇರ್ ಆಸ್ಪತ್ರೆಯಲ್ಲಿ ಆರು ದಿನಗಳ ಕಾಲ ಒಳರೋಗಿ ಯಾಗಿ ದಾಖಲಾಗಿರಲಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ಮುಂದುವರಿದ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರಿಕೆಯ ಕಂಡಿಕೆ 4 ರಲ್ಲಿ ಹೇಳಿರುವ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದ ಬಗ್ಗೆ ಹಣ ಪಾವತಿಸಿದ ರಿಸೀದಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ 2 ರಿಂದ 5 ರಲ್ಲಿ ನಮೂದು ಮಾಡಿರುವ ಔಷದಗಳನ್ನು ಒಳರೋಗಿಯಾಗಿ ಪಡೆದ ಚಿಕಿತ್ಸೆಯ ಬಿಲ್ಲಿನಲ್ಲಿ ನಮೂದು ಇದೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಕ್ರಮ ಸಂಖ್ಯೆ 2 ರಿಂದ 10 ರವರೆಗಿನ ಬಿಲ್ಲುಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABC020260982023/truecopy/order-4.pdf

ನಿಪಿ-16 ರ ಬಿಲ್ಲಿನ ಮೊತ್ತವನ್ನು ಕ್ಲೇಮ್ ಮಾಡಿಕೊಂಡಿರುವುದರಿಂದ ಅದರ ಜೆರಾಕ್ಸ್ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಬಿಲ್ಲುಗಳನ್ನು ನೀಡಿದವರನ್ನು ಕರೆದು ಸಾಕ್ಷ್ಯ ಮಾಡಿಸಲು ತೊಂದರೆ ಇಲ್ಲ. ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿಸಿರುವುದರಿಂದ ಪರಿಹಾರ ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ.

ನಾನು Modern Veer rays ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತೇನೆ. ನಿಪಿ-21 ರಲ್ಲಿ ರೂ. 12,771/- ಗಳು ನನ್ನ ಖಾತೆಗೆ ಜಮೆಯಾಗಿರುತ್ತದೆ ಎಂದರೆ ಸಾಕ್ಷಿಯು ರೂ. 18,000/- ಗಳು ಬರುತ್ತಿತ್ತು ಎಂದು ನುಡಿಯುತ್ತಾರೆ. ಸಂಬಳದ ಬಗ್ಗೆ ಕಂಪನಿಯವರು ನೀಡುತ್ತಿದ್ದ ಸ್ಯಾಲರಿ ಸರ್ಟಿಫಿಕೇಟನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನಗೆ ರೂ. 18,000/- ಗಳ ಸಂಬಳ ಬರುತ್ತಿರಲಿಲ್ಲ ಹಾಗಾಗಿ ಸ್ಯಾಲರಿ ಸರ್ಟಿಫಿಕೇಟನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-21 ರಲ್ಲಿ ನನಗೆ ರೂ. 18,000/- ಗಳ ಸಂಬಳ ಜಮೆಯಾದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ನಾನು ಈಗ ಯಾವುದೇ ಕೆಲಸಕ್ಕೆ ಹೋಗುತ್ತಿಲ್ಲ. ಅಪಘಾದಿಂದ ಉಂಟಾದ ಗಾಯಗಳಿಂದ ನಾನು ಕೆಲಸಕ್ಕೆ ಅರ್ಹಳಲ್ಲ ಎಂದು ಕೆಲಸದಿಂದ ತೆಗೆದ ಬಗ್ಗೆ ದಾಖಲಾತಿ ಹಾಜರುಪಡಿಸಿರುವುದಿಲ್ಲ. ನಾನು ಈಗಲೂ ಸಹಾ ಸದರಿ ಕಂಪನಿಯಲ್ಲಿಯೇ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಕೆಲಸ ಬಿಟ್ಟಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಭವಿಷ್ಯದ ನಷ್ಟದ ಸಂಬಂಧ ಪರಿಹಾರ ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದ ಕಂಡಿಕೆ 5 ರಲ್ಲಿ ಹೇಳಿರುವ ತೊಂದರೆ ಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಆರ್ಥಿಕ ನಷ್ಟು ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ,

ಮರುವಿಚಾರಣೆ ಇಲ್ಲಃ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

(ಕನ್ನಿಕಾ ಎಂ.ಎಸ್.)

**ಸದಸ್ಯರು, ಎಂ.ಎ.ಸಿ.ಟಿ., ಎಸ್‌ಸಿಸಿಹೆಚ್-08**

**ಬೆಂಗಳೂರು**

This is a True Copy of the Court Records Online. Authenticated @ districts.ecourtsindia.com/cnr/KABC020260982023/truecopy/order-4.pdf